# ಶ್ರೀಮಚ್ಚಂದ್ರಿಕಾಚಾರ್ಯರ ಮೂಲವೃಂದಾವನ



ಈಸು ಮುನಿಗಳಿದ್ದೇನು ಮಾಡಿದರು
ವ್ಯಾಸಮುನಿ ಮಧ್ವಮತನುದ್ಧರಿಸಿದ
— ಶ್ರೀ ಪುರಂದರದಾಸರು

## ಶ್ರೀಮಚ್ಚಂದ್ರಿಕಾಚಾರ್ಯರು ಕಲಿಸಿದ ಸಾಮರಸ್ಯದ ಪಾಠ

1447ನೇ ಇಸವಿ ಪ್ರಭವಸಂವತ್ಸರದ ವೈಶಾಖಶುದ್ಧ ಸಪ್ತಮಿ ಬೆಳಗಿನ ಜಾವದಲ್ಲಿ ಅವತರಿಸಿ 92 ವರ್ಷಗಳ ಕಾಲದ ತುಂಬು ಜೀವನದಲ್ಲಿ ಸರ್ವಶ್ರೇಷ್ಠ ಕೃತಿಗಳನ್ನು ರಚಿಸಿ, ಭಾರತೀಯ ಅಧ್ಯಾತ್ಮಿಕ ಶಾಸ್ತ್ರಕ್ಕೆ ಅವಿಸ್ಮರಣೀಯವಾದ ಕೊಡುಗೆಯನ್ನು ನೀಡಿ, ವಿಜಯನಗರ ಸಾಮ್ರಾಜ್ಯದ ಆರು ಜನ ರಾಜರಿಗೆ ರಾಜಗುರುಗಳಾಗಿ, ಶ್ರೀ ವಾದಿರಾಜರು, ಶ್ರೀ ವಿಜಯೀಂದ್ರರು  ಪುರಂದರದಾಸರು ಶ್ರೀ ಕನಕದಾಸರು ಮುಂತಾದವರಿಗೆ ವಿದ್ಯಾಗುರುಗಳಾಗಿ, ಸಮಗ್ರ ಜನತೆಗೆ ಅಧ್ಯಾತ್ಮದಾರಿದೀಪವಾಗಿ, ತಿರುಪತಿಯ ಶ್ರೀನಿವಾಸನನ್ನು ಅನನ್ಯವಾಗಿ ಆರಾಧಿಸಿ, ಶ್ರೀ ಗೋಪಾಲಕೃಷ್ಣನನ್ನು ತಮ್ಮ ಭಕ್ತಿಯಿಂದ ಒಲಿಸಿಕೊಂಡು, 1539 ನೇ ಇಸವಿ ಫಾಲ್ಗುಣ ಕೃಷ್ಣ

ಚತುರ್ಥೀ ಬೆಳಗಿನ ಜಾವದಲ್ಲಿ ತುಂಗಭದ್ರೆಯ ನಡುಗಡ್ಡೆಯಲ್ಲಿ ಯೋಗಿಯಂತೆ ದೇಹತ್ಯಾಗ ಮಾಡಿದ ಶ್ರೀಮಚ್ಚಂದ್ರಿಕಾಚಾರ್ಯರದು ಎಲ್ಲ ದೃಷ್ಟಿಯಿಂದಲೂ ಸಾರ್ಥಕವಾದ ಜೀವನ. ಆದರ್ಶವಾದ ಜೀವನ.

ಆಧ್ಯಾತ್ಮಿಕ ಗುರುಗಳನ್ನು ಆಯಾಯ ಪಂಥದವರು ಗೌರವಿಸುವದು ದೊಡ್ಡ ಮಾತಲ್ಲ. ಆದರೆ ಪರಮತೀಯರೂ ಗೌರವಿಸುವಂತಹ ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದಿದ್ದವರು ಶ್ರೀಮಚ್ಚಂದ್ರಿಕಾಚಾರ್ಯರು. ಅವರ ಸಮಕಾಲೀನಾನದ ತಾರ್ಕಿಕ ವಿದ್ವಾಂಸ ಪಕ್ಷಧರಮಿಶ್ರನಿಂದ ಆರಂಭಿಸಿ ಇಪ್ಪತ್ತೊಂದನೆಯ ಶತಮಾನದ ಶ್ರೀ ಅನಂತಕೃಷ್ಣಶಾಸ್ತ್ರಿಗಳು, ದಾಸಗುಪ್ತರವರೆಗೆ ಪರಮತೀಯ ವಿದ್ವಾಂಸರು ಶ್ರೀಮಚ್ಚಂದ್ರಿಕಾಚಾರ್ಯರ ವಿದ್ವತ್ತನ್ನು ಗೌರವಿಸಿದ್ದಾರೆ. ಇದಕ್ಕಿಂತ ಮಹತ್ತ್ವದ ಅಂಶ ಎಂದರೆ ಅವರ ಸಮಕಾಲೀನರಾದ ಸೋಮನಾಥ ಎಂಬ ಅದ್ವೈತಿವಿದ್ವಾಂಸರು ಅವರ ಅದ್ಭುತ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರ ಜೀವನಚರಿತ್ರೆಯನ್ನು ದಾಖಲಿಸಿರುವದು.

ಅದ್ವೈತಿವಿದ್ವಾಂಸರೊಬ್ಬರು ತಮ್ಮ ಸಮಕಾಲೀನರಾದ  ಮಾಧ್ವಯತಿಯನ್ನು ಹೊಗಳಿ ಚರಿತ್ರಗ್ರಂಥವನ್ನು ಬರೆಯಬೇಕಾದರೆ ಆಗಿನಕಾಲದಲ್ಲಿ ಅದೆಂತಹ ಅದ್ಭುತ ಸಾಮಾಜಿಕಸಾಮರಸ್ಯವಿತ್ತು ಎನ್ನುವದನ್ನು ನಾವು ಊಹಿಸಬಹುದು.

ಕೃಷ್ಣದೇವರಾಯನಂತಹ ಭರತಖಂಡದ ಸರ್ವಶ್ರೇಷ್ಠ ರಾಜನಿಗೆ ಮಾರ್ಗದರ್ಶಕರಾಗಿ, ತತ್ತ್ವೋಪದೇಶಕರಾಗಿ ಇದ್ದ ಅವರು ಒಬ್ಬ ರಾಜಗುರು ಉಳಿದ ಮತದವರೊಂದಿಗೆ, ಧರ್ಮದವರೊಂದಿಗೆ ಹೇಗಿರಬೇಕು ಎನ್ನುವದನ್ನು ಕೇವಲ ಪಾಠ ಹೇಳಿದವರಲ್ಲ, ಆಚರಿಸಿ ತೋರಿಸಿದವರು.

ಅವರು ತಿರುಪತಿಯಲ್ಲಿ ಶ್ರೀನಿವಾಸನ ಕೈಂಕರ್ಯವನ್ನು ಮಾಡಿ  ಶ್ರೀನಿವಾಸನಿಗೆ ಶಾಶ್ವತ ಸೇವೆ ನಡೆಯಲು ಗ್ರಾಮಗಳನ್ನು ನೀಡಿ ಶಾಸನ ಬರೆಸಿದ್ದಾರೆ. ಆ ಶಾಸನಗಳಲ್ಲಿ ಶ್ರೀನಿವಾಸನಿಗೆ ಅಧ್ಯಯನೋತ್ಸವ ನಡೆಯಲೂ ಸೇವೆ ಸಲ್ಲಿಸಿದ್ದಾರೆ, ಶ್ರೀಮಚ್ಚಂದ್ರಿಕಾಚಾರ್ಯರು.

ಅಧ್ಯಯನೋತ್ಸವ ಎಂದರೆ ತಮಿಳುಪ್ರಬಂಧಗಳನ್ನು ದೇವರ ಮುಂದೆ ಹಾಡುವದು. ಆಲ್ಲಿನ ಎಲ್ಲ ತತ್ವಗಳನ್ನೂ ಶ್ರೀಮಚ್ಚಂದ್ರಿಕಾಚಾರ್ಯರು ಒಪ್ಪುವದಿಲ್ಲ. ಆದರೆ, ಆ ಸಂಪ್ರದಾಯ ನಿಲ್ಲಬಾರದು ಎನ್ನುವ ಉದ್ದೇಶದಿಂದ ಶ್ರೀವೈಷ್ಣವರ ಅಧ್ಯಯನೋತ್ಸವಕ್ಕೆ ಕಾಣಿಕೆ ನೀಡಿ ಶಾಸನ ಬರೆಸಿದ ಅವರ ವಿಶಾಲದೃಷ್ಟಿ ಮಾತ್ರ ಎಂದಿಗೂ ಶ್ಲಾಘನೀಯವಾದದ್ದು.

ಅವರು ಕೇವಲ ಬ್ರಾಹ್ಮಣರ ಮೇಲೆ, ಹಿಂದೂಗಳ ಮೇಲಷ್ಟೇ ಪ್ರೀತಿಯನ್ನು ತೋರುತ್ತಿದ್ದುದಲ್ಲ. ಪರಮತೀಯರಾದ ಸಜ್ಜನರ ಮೇಲೂ ಅವರಿಗೆ ಅಷ್ಟೇ ಅಕ್ಕರೆಯಿತ್ತು.  ಅವರ ಅದ್ಭುತವ್ಯಕ್ತಿತ್ವಕ್ಕೆ ಮಾರು ಹೋಗಿದ್ದ ಶ್ರೀಕೃಷ್ಣದೇವರಾಯ ಅವರಿಗೆ ರತ್ನಾಭಿಷೇಕ ಮಾಡಿದ ಘಟನೆಯನ್ನು ಸೋಮನಾಥ ಕವಿ ತಮ್ಮ ವ್ಯಾಸಯೋಗಿಚರಿತೆಯಲ್ಲಿ ಉಲ್ಲೇಖಿಸುತ್ತಾರೆ. ರತ್ನಾಭಿಷೇಕ ಮುಗಿದ ಬಳಿಕ ಶ್ರೀಮಚ್ಚಂದ್ರಿಕಾಚಾರ್ಯರು ಅಲ್ಲಿ ನೆರೆದಿದ್ದ ಎಲ್ಲ ಮತದ ವಿದ್ವಾಂಸರಿಗೆ ಹಿಡಿಹಿಡಿಯಾಗಿ ಆ ರತ್ನಗಳನ್ನು ನೀಡಿಬಿಡುತ್ತಾರೆ. ಕೃಷ್ಣದೇವರಾಯನ

ಆಸ್ಥಾನದಲ್ಲಿ ಪಾರ್ಸೀಗಳೂ ಇದ್ದರು, ಮುಸಲ್ಮಾನರೂ ಇದ್ದರು. ಅವರಿಗೂ ಸಹಿತ ಈ ಅಭಿಷೇಕದ ರತ್ನಗಳನ್ನು ನೀಡುತ್ತಾರೆ ಶ್ರೀಮಚ್ಚಂದ್ರಿಕಾಚಾರ್ಯರು — **ಹಾರಾಯ ಪಾರಶೀಕಾನಾಮ್, ನಿಷ್ಕಾಯ ತುರುಷ್ಕಾನಾಮ್..**

ಸರ್ವಧರ್ಮದವರನ್ನೂ ಗೌರವಿಸುವ ಇವರ ಈ ಶ್ರೇಷ್ಠ ಮನೋಭಾವವನ್ನು ಕಂಡು ಬಹಮನಿಯ ಸುಲ್ತಾನರು, ದಿಲ್ಲಿಯ ಮುಸಲ್ಮಾನ ರಾಜರು ಒಂಟೆ, ಭೇರಿ, ಹಸಿರುಛತ್ರಗಳನ್ನು ನೀಡಿ ಗೌರವಿಸಿದ್ದರು. ಮುಮ್ಮಡಿ ಕೃಷ್ಣರಾಜಒಡೆಯರು ತಮ್ಮ ಒಂದು ಶಾಸನದಲ್ಲಿ “ಹಸಿರುಛತ್ರಿ ಶ್ರೀ ವ್ಯಾಸರಾಜಮಠದವರ ಐತಿಹಾಸಿಕ ಸವಲತ್ತು” ಎಂದು ಉಲ್ಲೇಖಿಸಿದ್ದಾರೆ.  ಕಾರಣ ಇಬ್ಬರು ಮುಸಲ್ಮಾನ ರಾಜರು ತಾವು ಮಾತ್ರ ಉಪಯೋಗಿಸುವ ಹಸಿರುಛತ್ರಿಯನ್ನು ಶ್ರೀಮಚ್ಚಂದ್ರಿಕಾಚಾರ್ಯರಿಗೆ ಗೌರವಪೂರ್ವಕವಾಗಿ ಸಮರ್ಪಿಸಿದ್ದು ಹಿಂದೂಧರ್ಮಕ್ಕೆ ಐತಿಹಾಸಿಕವಾಗಿ ಸಂದ ವಿಜಯ ಎನ್ನವದನ್ನು ವಡೆಯರವರು ಮನಗಂಡಿದ್ದರು.

ತತ್ವನಿಷ್ಠುರತೆ ಬೇರೆ, ಸಾಮಾಜಿಕ ಸಾಮರಸ್ಯ ಬೇರೆ, ಅವೆರಡೂ ಒಂದಕ್ಕೊಂದು ಸರ್ವಥಾ ಬಾಧಕವಾಗಿರಬಾರದು ಎಂದು ಪ್ರತಿಪಾದಿಸಿದವರು ಶ್ರೀಮಚ್ಚಂದ್ರಿಕಾಚಾರ್ಯರು. ಅದರಲ್ಲಿಯೂ ಒಂದು ಸಾಮ್ರಾಜ್ಯದ ಅಧಿಪತಿಗೆ ಧರ್ಮೋಪದೇಶಕರಾದ ಗುರುಗಳು ಮತಾಂಧರಾಗಿರಬಾರದು ಎನ್ನುವದನ್ನು ಸ್ವಯಂ ಆಚರಿಸಿ ತೋರಿಸಿದವರು ಶ್ರೀಮಚ್ಚಂದ್ರಿಕಾಚಾರ್ಯರು.

ಒಮ್ಮೆ ಶ್ರೀರಂಗದಲ್ಲಿ ಶ್ರೀವೈಷ್ಣವರಿಗೂ ಶೈವರಿಗೂ ಭೂಮಿಯ ಒಡೆತನದ ವಿಷಯದಲ್ಲಿ ಸಮಸ್ಯೆ ತಲೆದೋರುತ್ತದೆ. ಆಗ ಅವರಿಬ್ಬರೂ ತಮ್ಮ ಸಮಸ್ಯೆಯನ್ನು ಬಗೆಹರಿಸಲು ಆರಿಸಿಕೊಂಡದ್ದು ಶ್ರೀಮಚ್ಚಂದ್ರಿಕಾಚಾರ್ಯರನ್ನು. ಶ್ರೀಮಚ್ಚಂದ್ರಿಕಾಚಾರ್ಯರ ನಿಷ್ಪಕ್ಷಪಾತವಾಗಿ ನಿರ್ಣಯ ಮಾಡಿ ಎರಡೂ ಪಂಗಡದವರ ಮನಸ್ಸಿಗೂ ಒಪ್ಪಿಗೆಯಾಗುವಂತೆ ಸೀಮೆಯನ್ನು ನಿರ್ಧರಿಸುತ್ತಾರೆ. ಅಲ್ಲಿ ಹನುಮಂತನನ್ನು ಪ್ರತಿಷ್ಠಾಪಿಸಿ ಈಚೆಯ ಭಾಗ ಶ್ರೀವೈಷ್ಣವರದು ಆಚೆಯ ಭಾಗ ಶೈವರದು ಎಂದು ಶಾಶ್ವತ

ಪರಿಹಾರವನ್ನು ನೀಡುತ್ತಾರೆ. ಇವತ್ತಿಗೂ ಶ್ರೀರಂಗದಲ್ಲಿ ಆ ಹನುಮಂತನ ಗುಡಿ ಶ್ರೀಮಚ್ಚಂದ್ರಿಕಾಚಾರ್ಯರ ನಿಷ್ಪಕ್ಷಪಾತತೆಗೆ ಸಾಕ್ಷಿಯಾಗಿ ನಿಂತಿದೆ.

ಒಬ್ಬ ರಾಜಗುರುವಾಗಿ ಅವರಿಗಿದ್ದ ಸಾಮಾಜಿಕ ಕಳಕಳಿ ಅಪಾರವಾದದ್ದಷ್ಟೇ ಅಲ್ಲ, ಅದನ್ನೂ ಕಾರ್ಯಗತಗೊಳಿಸುವ ಅವರ ಆಲೋಚನಾವಿಧಾನ ಸಹಿತ ಅದ್ಭುತವಾಗಿತ್ತು. ಸಮಾಜದಲ್ಲಿ ಧರ್ಮ ಉಳಿಯಬೇಕು ಎಂದರೆ ಧರ್ಮದ ಕೇಂದ್ರವಾದ ದೇವಸ್ಥಾನಗಳಿರಬೇಕು ಎಂದು ಹಳ್ಳಿಹಳ್ಳಿಗಳಲ್ಲಿ ದೇಗುಲಗಳನ್ನು ನಿರ್ಮಾಣ ಮಾಡಿದವರು ಶ್ರೀಮಚ್ಚಂದ್ರಿಕಾಚಾರ್ಯರು.

ಅವರು ಕೇವಲ ದೇವಸ್ಥಾನ ಕಟ್ಟಿ ಬಿಡಲಿಲ್ಲ. ಆ ದೇವಸ್ಥಾನ ನಡೆಯಲು ಹೊಲಗಳನ್ನು ನೀಡಿದರು.

ದೇವಸ್ಥಾನ ನಡೆಯಲಿಕ್ಕೆ ಜಮೀನಿದೆ, ಆದರೆ, ಅದರ ಉಸ್ತುವಾರಿ ನೋಡಿಕೊಳ್ಳುವ ಪಂಡಿತರ ಜೀವನ ಹೇಗೆ? ಶ್ರೀಮಚ್ಚಂದ್ರಿಕಾಚಾರ್ಯರು ಅವರಿಗೂ ಜಮೀನುಗಳನ್ನು ನೀಡಿದರು.

ಹೊಲದಲ್ಲಿ ಕೃಷಿ ಮಾಡುತ್ತಿದ್ದಲ್ಲಿ ಶಾಸ್ತ್ರದ ಅಧ್ಯಯನ ಅಧ್ಯಾಪನಗಳು ಹೇಗೆ? ಅದಕ್ಕಾಗಿ ಹೊಲದಲ್ಲಿ ಕೆಲಸ ಮಾಡಲು ಜನರನ್ನು ನೇಮಿಸಿದರು.

ಇನ್ನೊಬ್ಬರ ಜಮೀನಿನಲ್ಲಿ ದುಡಿಯುತ್ತಿದ್ದರೆ ಈ ಕೃಷಿವರ್ಗದವರ ಜೀವನ ನಡೆಯುವದು ಹೇಗೆ? ಶ್ರೀಮಚ್ಚಂದ್ರಿಕಾಚಾರ್ಯರು ಕೃಷಿವರ್ಗದ ಜನರಿಗೂ ಕೃಷಿಭೂಮಿಯನ್ನು ನೀಡಿದರು.

ದೇವಸ್ಥಾನಕ್ಕೆ ಒಂದು ಎಕರೆಯಾದರೆ ದೇವಸ್ಥಾನದ ಜವಾಬ್ದಾರಿ ಹೊತ್ತ ಪಂಡಿತರಿಗೆ ಎರಡು ಎಕರೆ ಜಮೀನು, ಆ ಪಂಡಿತರ ಮತ್ತು ದೇವಸ್ಥಾನದ ಜಮೀನಿನ ಜವಾಬ್ದಾರಿ ಹೊತ್ತ ಕೃಷಿವರ್ಗಕ್ಕೆ ನಾಲ್ಕು ಎಕರೆ ಜಮೀನು.

ಕೇವಲ ಹೊಲಗಳನ್ನು ನೀಡಿದ್ದಷ್ಟೇ ಅಲ್ಲ, ಬೆಳೆ ಬೆಳೆಯಲು  ಸಮೃದ್ಧವಾಗಿ ನೀರಿರಬೇಕು ಎಂದು ಶ್ರೀಮಚ್ಚಂದ್ರಿಕಾಚಾರ್ಯರು ಕೆರೆಗಳ ನಿರ್ಮಾಣ ಮಾಡಿದರು. ನೀರು ದೊರೆಯದ ಪ್ರದೇಶಗಳಲ್ಲಿ ತಮ್ಮ ತಪಸ್ಸಿನ ಸಾಮರ್ಥ್ಯದಿಂದ ನೀರು

ದೊರೆಯುವಂತೆ ಮಾಡಿದರು. ಈ ರೀತಿಯ ವ್ಯವಸ್ಥೆಯಿಂದ ಕೂಡಿದ 732 ಹನುಮಂತನ ದೇಗುಲಗಳನ್ನು ಶ್ರೀಮಚ್ಚಂದ್ರಿಕಾಚಾರ್ಯರು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ನಿರ್ಮಿಸಿದ್ದಾರೆ. ಅವರು ನಿರ್ಮಿಸಿದ ವ್ಯಾಸಸಮುದ್ರ ಎಂಬ ಕೆರೆ, ಚನ್ನಪಟ್ಟಣದ ಬಳಿಯ ಬ್ರಹ್ಮಣ್ಯಪುರದ ಕೆರೆ ಐತಿಹಾಸಿಕ ಮಹತ್ತ್ವವನ್ನು ಪಡೆದಿವೆ.

ನಾವು ಶ್ರೀಕೃಷ್ಣದೇವರಾಯನ ಕಾಲವನ್ನು ಸುವರ್ಣಯುಗ ಎಂದು ಕರೆಯುತ್ತೇವೆ. ಆ ಸುವರ್ಣಯುಗಕ್ಕೆ ಕೇವಲ ಒಬ್ಬ ರಾಜ ಕಾರಣನಾಗಲು ಸಾಧ್ಯವಿಲ್ಲ, ಅಂದಿನ ಸಮಾಜ, ನಾಗರೀಕರು, ಸೈನಿಕರು, ದಕ್ಷ ಅಧಿಕಾರಿಗಳು, ಶ್ರೀಮಚ್ಚಂದ್ರಿಕಾಚಾರ್ಯರಂತಹ ಧೀಮಂತ ನಿಷ್ಪಕ್ಷಪಾತ ಗುರುಗಳು ಎಲ್ಲರೂ ಕಾರಣರಾಗುತ್ತಾರೆ.

ಶ್ರೀಮಚ್ಚಂದ್ರಿಕಾಚಾರ್ಯರಂತಹ ಗುರುಗಳು ಕಾಲಕಾಲಕ್ಕೆ ಹುಟ್ಟಿಬಂದು ಧರ್ಮವನ್ನು ಉಜ್ಜೀವನಗೊಳಿಸಲಿ. ಕೃಷ್ಣದೇವರಾಯನಂತಹ

ರಾಜರು ಮತ್ತೆಮತ್ತೆ ಹುಟ್ಟಿಬಂದು ನಮ್ಮ ಭವ್ಯಭಾರತದ ವಿಜಯಪತಾಕೆಯನ್ನು ಹಾರಿಸುತ್ತಿರಲಿ ಎಂದು ನಾವೆಲ್ಲರೂ ಕೂಡಿ ಪ್ರಾರ್ಥಿಸೋಣ. ರಾಷ್ಟ್ರ, ರಾಜ್ಯ, ಧರ್ಮಗಳ ಉಳಿವಿಗಾಗಿ, ಏಳ್ಗೆಗಾಗಿ ಮನಃಪೂರ್ವಕವಾಗಿ ಶ್ರಮಿಸೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491